ದಿನಾಂಕಃ **14.07.2026**

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್.ಆರ್.ಆರ್. ವಕೀಲರಿಂದಃ</u>

ನನ್ನ ತಾತ ದರುವಣ್ಣರವರಿಗೆ ಚಿಕ್ಕಣ್ಣ ಮತ್ತು ದಾಸಪ್ಪ ಎಂಬ ಇಬ್ಬರು ತಮ್ಮಂದಿರು ಎಂದರೆ ಸರಿ. ದಾವಾ 1 ರಿಂದ 5 ನೇ ಸ್ವತ್ತುಗಳು ದುರವಣ್ಣನ ತಂದೆಯಿಂದ ದರುವಣ್ಣರವರಿಗೆ ಬಂದಿರುತ್ತವೆ ಎಂದರೆ ಸರಿ. ದರುವಣ್ಣ ಮತ್ತು ಅವರ ಅಣ್ಣ ತಮ್ಮಂದಿರು 1960 ರಲ್ಲಿಯೇ ಆಸ್ತಿಗಳನ್ನು ಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ದಾವಾ 1 ರಿಂದ 5 ನೇ ಸ್ವತ್ತುಗಳು ದರುವಣ್ಣ ಮತ್ತು ಅವರ ಅಣ್ಣ ತಮ್ಮಂದಿರು ಭಾಗ ಮಾಡಿಕೊಂಡಾಗ ದರುವಣ್ಣರವರ ಪಾಲಿಗೆ ಬಂದ ಆಸ್ತಿಗಳು ಎಂದರೆ ಸರಿ. ನನ್ನ ತಾತ ದರುವಣ್ಣರವರನ್ನು ನಾನು ನೋಡಿರುವುದಿಲ್ಲ. ನನ್ನ ತಾತ ದರುವಣ್ಣ ತೀರಿಕೊಂಡ ನಂತರ ನನ್ನ ತಂದೆ ಮನೆಯ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ದರುವಣ್ಣ 1963-64 ರಲ್ಲಿಯೇ ತೀರಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ತಾತ ತೀರಿಕೊಂಡ ನಂತರ ನನ್ನ ತಂದೆ ಮತ್ತು ಚಿಕ್ಕಪ್ಪಂದಿರು ಒಂದೇ ಮನೆಯಲ್ಲಿ ವಾಸವಾಗಿದ್ದರು ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಬೇರೆ ಬೇರೆಯಾಗಿ ವಾಸವಾಗಿದ್ದರು ಎಂದು ಉತ್ತರಿಸುತ್ತಾರೆ. ಆದರೆ ಯಾವ ದಿನಾಂಕದಂದು ವಿಭಾಗ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಭಾಗ ಮಾಡಿಕೊಂಡಿರುವುದಕ್ಕೆ ಸಂಬಂಧಿಸಿದಂತೆ ದಾಖಲೆ ಮಾಡಿಕೊಂಡಿರುತ್ತಾರೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ.

14/7/2026

2. ವಿಭಾಗದಲ್ಲಿ ನನ್ನ ತಂದೆ ಮತ್ತು ಚಿಕ್ಕಪ್ಪಂದಿರಿಗೆ ಯಾವ ಯಾವ ಆಸ್ತಿ ಬಂದಿತ್ತು ಎಂದು ಹೇಳಲು ಆಗುವುದಿಲ್ಲ. ವಿಭಾಗದಂತೆ ನನ್ನ ತಂದೆ ಮತ್ತು ಚಿಕ್ಕಪ್ಪಂದಿರ ಹೆಸರಿಗೆ ಖಾತೆ ವರ್ಗಾವಣೆಯಾದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಾವಾ 1 ರಿಂದ 5 ನೇ ಸ್ವತ್ತುಗಳು ಇಂದಿಗೂ ನನ್ನ, 1 ನೇ ವಾದಿ ಮತ್ತು 6 ನೇ ಪ್ರತಿವಾದಿಯ ಹೆಸರಿನಲ್ಲಿ ಜಂಟಿಯಾಗಿ ಖಾತೆ ಇರುತ್ತದೆ ಎಂದರೆ ಸರಿ. ದಾವಾ 1 ರಿಂದ 5 ನೇ ಸ್ವತ್ತುಗಳಲ್ಲಿ ವಾದಿಗಳು ಮತ್ತು ಪ್ರತಿವಾದಿಗಳೆಲ್ಲರೂ ಜಂಟಿ ಸ್ವಾಧೀನದಲ್ಲಿ ಇರುವುದರಿಂದ ಸದರಿ ಸ್ವತ್ತುಗಳ ಖಾತೆ ಜಂಟಿಯಾಗಿ ಬರುತ್ತಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂದೆ ಮತ್ತು ಅವರ ಅಣ್ಣ ತಮ್ಮಂದಿರು ಭಾಗ ಮಾಡಿಕೊಂಡ ನಂತರ ಅವರವರ ಭಾಗದಲ್ಲಿ ಮನೆ ಕಟ್ಟಿಕೊಂಡು ಅವರ ಭಾಗದಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದು ಉತ್ತರಿಸುತ್ತಾರೆ. ಕುಟುಂಬದಲ್ಲಿ ಹೆಣ್ಣು ಮಕ್ಕಳ ಮಧ್ಯೆ ಹೊಂದಾಣಿಕೆ ಇಲ್ಲದ ಕಾರಣ ಪ್ರತ್ಯೇಕವಾಗಿ ವಾಸವಾಗಿರುತ್ತಾರೆ ಹೊರತು ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ವಾಸವಾಗಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

3. ಸರ್ವೆ.ನಂಬರ್.76 ರಲ್ಲಿ 4 ಎಕರೆ ಜಮೀನನ್ನು ದರುವಣ್ಣ ಜೀವಂತವಾಗಿ ಇದ್ದಾಗಲೇ ದರುವಣ್ಣ ಮತ್ತು ಅವರ ಮಕ್ಕಳು ಸಾಗುವಳಿ ಮಾಡುತ್ತಿದ್ದರು ಎಂದು ಸೂಚಿಸಿದ್ದಕ್ಕೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿ ಮುಂದುವರೆದು ನಾವೇ ಸಾಗುವಳಿ ಮಾಡುತ್ತಿದ್ದೇವು ಎಂದು ಉತ್ತರಿಸುತ್ತಾರೆ. ದರುವಣ್ಣ ದಾವಾ 6 ನೇ ಸ್ವತ್ತನ್ನು ಮಂಜೂರು ಮಾಡುವಂತೆ ಅರ್ಜಿ ಸಲ್ಲಿಸಿದ್ದರು, ದರುವಣ್ಣ ತೀರಿಕೊಂಡ ಕಾರಣ ಅವರ ದೊಡ್ಡಮಗನ ಹೆಸರಿಗೆ ಮಂಜೂರಾಗಿರುತ್ತದೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿ ಇರಬಹುದೇನೋ ನನಗೆ ಗೊತ್ತಿರುವುದಿಲ್ಲ ಆದರೆ ನನ್ನ ತಂದೆಯ ಹೆಸರಿಗೆ ಮಂಜೂರಾಗಿರುತ್ತದೆ ಎಂದು ಉತ್ತರಿಸುತ್ತಾರೆ. ನನ್ನ ತಂದೆ

14/7/2026

ದರುವಣ್ಣನ ದೊಡ್ಡ ಮಗ ಮತ್ತು ಮನೆಯ ಯಜಮಾನ ಆದ ಕಾರಣ ನಿಮ್ಮ ತಂದೆಯ ಹೆಸರಿಗೆ ದಾವಾ 6 ನೇ ಸ್ವತ್ತನ್ನು ಮಂಜೂರು ಮಾಡಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ನಮ್ಮ ತಂದೆ ತೀರಿಕೊಂಡ ನಂತರ ನಾವು ಖಾತೆ ಮಾಡಿಸಿಕೊಂಡು ಸಾಗುವಳಿ ಮಾಡುತ್ತಿರುತ್ತೇವೆ ಎಂದು ಉತ್ತರಿಸುತ್ತಾರೆ. ದಾವಾ 6 ನೇ ಸ್ವತ್ತು ದರುವಣ್ಣರವರ ಜೀವಿತ ಕಾಲದಿಂದಲೂ ದರುವಣ್ಣರವರ ಎಲ್ಲಾ ವಾರಸುದಾರರ ಸ್ವಾಧೀನದಲ್ಲಿ ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ.

4. ದಾವಾ ಸ್ವತ್ತುಗಳು ದರುವಣ್ಣನ ಮೂರು ಜನ ಮಕ್ಕಳ ಒಟ್ಟು ಕುಟುಂಬದ ಆಸ್ತಿಗಳು ಎಂದು ಸೂಚಿಸಿದ್ದಕ್ಕೆ ಸಾಕ್ಷಿ ಇರಬಹುದೇನೋ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿ ಮುಂದುವರೆದು ಭಾಗ ಮಾಡಿಕೊಂಡಿರುತ್ತವೇ ಅದರಂತೆ ಅನುಭವ ಇರುತ್ತವೆ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ದರುವಣ್ಣನ ಮಕ್ಕಳ ಮಧ್ಯೆ ಅಥವಾ ವಾದಿಗಳು ಮತ್ತು ಪ್ರತಿವಾದಿಗಳ ಮಧ್ಯೆ ಯಾವುದೇ ವಿಭಾಗ ಆಗಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ದರುವಣ್ಣನ ಮಕ್ಕಳು ವಿಭಾಗ ಮಾಡಿಕೊಂಡಿರುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ನಿಡಿ-2 ದರುವಣ್ಣ ಮತ್ತು ಅವರ ಅಣ್ಣ ತಮ್ಮಂದಿರು ಮಾಡಿಕೊಂಡ ವಿಭಾಗಕ್ಕೆ ಸಂಬಂಧಿಸಿದಂತೆ ಆದ ದಾಖಲೆ ಆಗಿರುತ್ತದೆ ಎಂದರೆ ಸರಿ.

5. ದಾವಾ ಸ್ವತ್ತುಗಳಲ್ಲಿನ ಸ್ವಾಧೀನಕ್ಕೆ ಸಂಬಂಧಿಸಿದಂತೆ 2021 ರಲ್ಲಿ ನಮಗೆ ಮತ್ತು ವಾದಿಗಳಿಗೆ ಜಗಳ ಆಗಿರುತ್ತದೆ ಎಂದರೆ ಸರಿ. ಆಗ ವಾದಿಗಳು ನಮಗೆ ದಾವಾ ಸ್ವತ್ತುಗಳಲ್ಲಿ 1/3 ನೇ ಭಾಗ ಕೊಡುವಂತೆ ಕೇಳಿರುತ್ತಾರೆ ಆದರೆ ನಾವು ಕೊಟ್ಟಿರುವುದಿಲ್ಲ. ದಾವಾ ಸ್ವತ್ತುಗಳಲ್ಲಿ

ಲ್ ಪ ನ್ನ

14/7/2026

ವಾದಿಗಳಿಗೆ 1/3 ನೇ ಭಾಗದ ಹಕ್ಕು ಇರುತ್ತದೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿ ತಾತನ ಆಸ್ತಿಗಳಲ್ಲಿ ಹಕ್ಕು ಇರುತ್ತದೆ ಆದರೆ ಸರ್ವೆ.ನಂಬರ್.76 ರಲ್ಲಿ ಅವರಿಗೆ ಹಕ್ಕು ಇರುವುದಿಲ್ಲ ಎಂದು ಉತ್ತರಿಸುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

14/7/2026

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ